ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ನಿವೃತ್ತಿ ನಂತರ ಮರು ನಿಯೋಜನೆಗೊಂಡವರ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :-

1224 (1471) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ನಿವೃತ್ತಿ ನಂತರವು ಎಷ್ಟು ಇಲಾಖೆಯಲ್ಲಿ ಇಲಾಖಾ ಕಾರ್ಯದರ್ಶಿಯವರನ್ನು ಅದೇ ಇಲಾಖೆಯಲ್ಲಿ ಮುಂದುವರೆಸಲಾಗಿದೆ ; ಮುಂದುವರೆಸಲು ಇರುವ ಮಾನದಂಡದ ಉದ್ದೇಶವೇನು ;

(ಆ) ತಮ್ಮ ಸೇವಾ ಅವಧಿಯಲ್ಲಿ ಉತ್ತಮ ಹೆಸರು ಪಡೆಯದೆ ಪಾಸ್ ಪೋರ್ಟ್ ಹಗರಣದಲ್ಲಿ ಸರ್ಕಾರದಿಂದ ಚೀಮಾರಿ ಹಾಕಿಸಿಕೊಂಡ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಹೆಸರು ಸಮೇತ ವಿವರ ಒದಗಿಸುವುದು ; ಇಂತಹ ಎಷ್ಟು ಅಧಿಕಾರಿಗಳನ್ನು ನಿವೃತ್ತಿ ನಂತರ ಮರು ನೇಮಕಾತಿ ಮಾಡಿಕೊಳ್ಳಲಾಗಿದೆ ;

(ಇ) ಕೂಡಲೇ ಇವರನ್ನು ಸೇವೆಯಿಂದ ಬಿಡುಗಡೆಗೊಳಿಸಿ ಸದರಿ ಹುದ್ದೆಗೆ ಪ್ರತಿಭಾಶಾಲಿಗಳಿಗೆ ಅವಕಾಶ ಕಲ್ಪಿಸಲಾಗುವುದೇ ; ಈ ಪ್ರಕರಣ ಸರ್ಕಾರದ ಯಾವ ಹಂತದಲ್ಲಿದೆ ?